ಅವರಿಗೆ ಇರುವಂತಹ ಮಾಹಿತಿಯ ಪ್ರಕಾರ, ಇದು ನಿರಾಧಾರವಾದಂತಹ ಸುದ್ದಿಯಾಗಿದ್ದರೆ, ನಾನು ಇದನ್ನು ಅಧಿಕಾರಿಗಳೊಡನೆ ಮಾತನಾಡಿ, ತಮಗೆ ವಿಚಾರವನ್ನು ತಿಳಿಸುತ್ತೇನೆ. ಈಗಾಗಲೇ ತಮಗೆ ಗೊತ್ತಿರುವಂತೆ ಈ ಪರಿಸರ ವಿಚಾರವಾಗಿ ದೊಡ್ಡ ವಿವಾದ ನಡೆದಿದೆ. ನಾವು ಅಭಿವೃದ್ಧಿಯ ಪರವಾಗಿ ನಿಲ್ಲಬೇಕೋ, ಪರಿಸರ ಈ ವಿಚಾರಗಳನ್ನು ಕಾಯ್ದುಕೊಳ್ಳಬೇಕೋ, ಈ ವಿಚಾರಗಳ ಬಗ್ಗೆ ಚರ್ಚೆ ನಡೆದಿವೆ. ಇಂತಹ ವಿಚಾರಗಳ ಬಗ್ಗೆ ತಮ್ಮ ಇಡೀ ಅನಿಸಿಕೆಯನ್ನು ಸರ್ಕಾರದವರು ಅತ್ಯಂತ ಸಹಾನುಭೂತಿಯಿಂದ ಪರಿಶೀಲಿಸಿ ಸೂಕ್ತವಾದ ಉತ್ತರವನ್ನು ಕೊಡುತ್ತೇವೆ.

ಶ್ರೀ ಸರಿಕರ ಭೀಮಪ್ಪ ಚನ್ನಪ್ಪ(ರಾಯಭಾಗ): ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮ ಬೆಳಗಾಂ ಜಿಲ್ಲೆಯ ರಾಯಭಾಗ ತಾಲೂಕಿನಲ್ಲಿ 2ನೇ ತಾರೀಖಿಗೆ ಕೃಷ್ಣ ನದಿಯಲ್ಲಿ 13.05 ಮೀಟರ್ ಕ್ಯೂಸೆಕ್ಸ್ ನೀರು ಬಂದು ನಾಲ್ಕು ಹಳ್ಳಿಯ ಸುತ್ತಮುತ್ತಲು ನೀರು ಬಂದು ಜನರಿಗೆ ಹೋಗಿ ಬರಲು ತೊಂದರೆಯಾಗಿದೆ. ಅಲ್ಲಿ ತಹಶೀಲ್ದಾರರಾಗಲಿ, ಡಿ.ಸಿ.ಗಳಾಗಲಿ, ಅಲ್ಲಿಗೆ ಬಂದು ಯಂತ್ರಚಾಲಿತ ದೋಣಿಯನ್ನು ಕೊಡಬೇಕೆಂದು ಸುಮಾರು 10ವರ್ಷ, 15 ವರ್ಷ,20 ವರ್ಷಗಳಿಂದ ಜನರು ಶಾಸಕರನ್ನು, ಸಚಿವರನ್ನು ಕೇಳುತ್ತಿದ್ದಾರೆ. ಆದರೂ ಇದುವರೆಗೂ ಈ 15–20 ವರ್ಷಗಳಿಂದ ಅಲ್ಲಿಗೆ ಬಂದು ಯಂತ್ರಚಾಲಿತ ದೋಣಿಯನ್ನು ಕೊಡುವುದಕ್ಕೆ ಆಗಲಿಲ್ಲ. ನಾನು ಈ 2ನೇ ತಾರೀಖಿನಂದು ಅಲ್ಲಿ 1ನೇ ತಾರೀಖಿನಂದು ಅಧಿವೇಶವನ್ನು ಮುಗಿಸಿಕೊಂಡು ಭೇಟಿ ಕೊಟ್ಟು ಜೊತೆಗೆ ತಹಶೀಲ್ದಾರರನ್ನು ಕರೆದುಕೊಂಡು ಹೋಗಿದ್ದೆ. ಅಲ್ಲಿ ಸುತ್ತಮುತ್ತಲೂ 4 ಹಳ್ಳಿಗಳು ಗುಂಡವಾಡು, ಕಮಲಾಪುರ, ಸಿದ್ಧಾಪುರ ಮತ್ತು ಹಳೆದಿಗ್ಗೆವಾಡಿಗಳಿಗೆ ನೀರು ತುಂಬಿದೆ. ನಾನು ಆಫೀಸರ್‌ಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಒಂದು ಫೋಟೋವನ್ನು ತೆಗೆದುಕೊಂಡು ಬಂದಿದ್ದೇನೆ. ಅದಕ್ಕೆ ತಾವು ದಯಾಳುಗಳಾಗಿ, ಅದು ಯಾವುದೇ ಸಚಿವರಾಗಲಿ, ಮಂತ್ರಿಗಳಾಗಲಿ, ತಾವು ಪರ್ಮಿಷನ್ ಕೊಟ್ಟು ಈ ನಾಲ್ಕು ಹಳ್ಳಿಗಳಿಗೆ ಒಂದು ಯಂತ್ರ ಚಾಲಿತ ದೋಣಿಯನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದು ಅಲ್ಲದೆ, 50 ವರ್ಷಗಳಿಂದ ಹಳೆದಿಗೆವಾಡಿ ಕೊನೆಯ ಊರಾಗಿದೆ. ಅಲ್ಲಿಗೆ ಯಾರೂ ಸಚಿವರಾಗಲಿ, ಶಾಸಕರಾಗಲಿ ಹೋಗಿಲ್ಲವೆಂದು ಕಾಣುತ್ತದೆ. ಏಕೆಂದರೆ ಇದು ಎರಡೂವರೆ ಕಿ.ಮೀ ಹಾದಿ ಇದೆ. ಆ ಹಾದಿಯಲ್ಲಿ ಒಂದು ಮೋಟಾರು ಸೈಕಲ್ ಅನ್ನು ತೆಗೆದುಕೊಂಡು ಹೋಗುಲು ತ್ರಾಸವಾಗುತ್ತದೆ. ಅದಕ್ಕೆ ತಾವು ದಯಾಳುಗಳಾಗಿ ಸಲಹೆಕೊಟ್ಟು ಸಚಿವರಿಗಾಗಲಿ ಅಧಿಕಾರಿಗಳಿಗಾಗಲಿ, ಗಮನವನ್ನು ಸೆಳೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಾಲ್ಕು ಹಳ್ಳಿಗಳ ಜನರು ಆಚೆಗೆ ಈಚೆಗೆ ಓಡಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ಇಲ್ಲಿ ಶಾಸಕರು ಬಂದು ವಿಷಯವನ್ನು ರೈಸ್ ಮಾಡುವ ಸ್ಥಿತಿ ಇರಲಿಲ್ಲ. ಇಲ್ಲಿಗೆ ಜಿಲ್ಲಾಧಿಕಾರಿಗಳು ಹೋಗಿ ಅಲ್ಲಿ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಆದರೆ ಈ ವರ್ಗಾವರ್ಗಿಯಲ್ಲಿ ಈ ಜಿಲ್ಲಾಧಿಕಾರಿಗಳು ಸಿಕ್ಕಿಕೊಂಡು ಆ ಜನರಿಗೆ ಊರು ಬಿಟ್ಟು ಆಚೆ ಹೋಗಿ ಬರುವುದಕ್ಕೆ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸನ್ಮಾನ್ಯ ಸಚಿವರು ಏನಾದರೂ ದೊಡ್ಡ ಮನಸ್ಸು ಮಾಡಿ ಒಂದೊಂದು ಹಳ್ಳಿಗೂ ಒಂದೋ ಎರಡೋ, ಮೋಟಾರ್ ಬೋಟ್‌ಗಳನ್ನು ಹಾಕಿ, ಅವರಿಗೆ ಓಡಾಡುವಂಥಾದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ನಾವು ಡಿಮ್ಯಾಂಡ್ ಮಾಡುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, "ಜಲಾವೃತವಾಗಿರತಕ್ಕಂಥ ಆ ಗ್ರಾಮಗಳು ದ್ವೀಪದಂತೆ ಆಗಿವೆ. ಅವುಗಳಿಗೆ ಸಂಚಾರಕ್ಕೆ ಅನುಕೂಲವನ್ನು ಕಲ್ಪಿಸಿಕೊಡಬೇಕು ಎನ್ನುವಂಥ ಶಾಸಕರ ಮನವಿ ನಿಜವಾಗಿಯೂ ಕೂಡ ನ್ಯಾಯ ಸಮ್ಮತವಾದುದು. ಆ ನಾಲ್ಕು ಗ್ರಾಮಗಳಿಗೆ ಸಂಬಂಧಪಟ್ಟಂತೆ ನಿಗದಿತ ಸಮಯದಲ್ಲಿ ಸಂಚಾರ ವ್ಯವಸ್ಥೆ ಕಲ್ಪಿಸಲು, ಅಲ್ಲಿಯ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಯಾಂತ್ರೀಕೃತ ದೋಣಿ ಬೇಕಾಗುತ್ತದೆ ಎಂದರೆ ಯಾಂತ್ರೀಕೃತ ದೋಣಿಯನ್ನು ಅಥವಾ ಅಲ್ಲಿ ನೀರು ಅಷ್ಟು ದೊಡ್ಡಮಟ್ಟದಲ್ಲಿ ನಿಲ್ಲುವುದಿಲ್ಲವಾದ್ದರಿಂದ ಯಾಂತ್ರೀಕೃತ ದೋಣಿಗಳು ಬೇಕಾಗುವುದಿಲ್ಲ. ಅದರ ಬದಲು ತೆಪ್ಪದ ರೀತಿಯಲ್ಲಿ ಆಗಬೇಕು ಎನ್ನುವುದಾದರೆ. ಅಂಥ ತೆಪ್ಪಗಳನ್ನು ಖಂಡಿತವಾಗಿಯೂ ಒದಗಿಸಿಕೊಡತಕ್ಕಂಥ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಸರಿಕರ ಭೀಮಪ್ಪ ಚನ್ನಪ್ಪ: ಅಲ್ಲಿ ಒಂದು ರಸ್ತೆ ಸಲುವಾಗಿ ಕೇಳಿ ಕೊಳ್ಳುತ್ತಿದ್ದೇನೆ. ಅಲ್ಲಿ ಎರಡೂವರೆ ಕಿ.ಮೀ. ಹಾದಿ ಇದೆ. ಆ ಹಾದಿಯನ್ನು ಇದುವರೆಗೂ ದುರಸ್ತಿ ಮಾಡಿಲ್ಲ. ಅದಕ್ಕಾಗಿ ನಾನು ಕೇಳಿಕೊಳ್ಳುವುದೇನೆಂದರೆ...

ಅಧ್ಯಕ್ಷರು: ಕ್ಲಾರಿಫಿಕೇಶನ್ ಅವಕಾಶವಿಲ್ಲ. ದಯವಿಟ್ಟು ಎಲ್ಲರಿಗೂ ಹೇಳಿ ಏಕೆ ಈ ರೀತಿ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸರಿಕರ ಭೀಮಪ್ಪ ಚನ್ನಪ್ಪ: ಅಲ್ಲಿ ಜನರಿಗೆ ಬಹಳಷ್ಟು ತ್ರಾಸವಾಗುತ್ತಿರುವುದರಿಂದ ರಸ್ತೆ ಸೌಲಭ್ಯ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಸಚಿವರು ಹೇಳಿದ್ದಾರಲ್ಲ. ಶೂನ್ಯವೇಳೆಯಲ್ಲಿ ಕ್ಲಾರಿಫಿಕೇಶನ್‌ಗೆ ಅವಕಾಶವಿಲ್ಲ. ದಯಮಾಡಿ ಕುಳಿತುಕೊಳ್ಳಿ.